ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ,
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86,

# ದಿನಾಂಕ:-04-06-2022 ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯ:ಬಿ12(5)/ಪಿಆರ್/35/2020-21 ದಿನಾಂಕ:21:09:2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್/43/2022-23 ದಿನಾಂಕ:02-06-2022

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ಪಿ. ವಿಶ್ವನಾಥ್ | ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ), ಬಿಬಿಎಂಪಿ, ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67. |
| 2. | ಶ್ರೀ. ಬಿ. ಸಿ ರವಿಕುಮಾರ್ | ಸಹಾಯಕ ಅಭಿಯಂತರು ವಾರ್ಡ-67 ಹಾಗು ಸಮಿತಿ ಕಾರ್ಯದರ್ಶಿಗಳು. |
| 3. | ಶ್ರೀ. ಎಲ್ ತಿಮ್ಮರಸ್ | ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ. |
| 4. | ಶ್ರೀ. ಉದಯ ಶಂಕರ್ | 1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. |
| 5. | ಶ್ರೀಮತಿ. ಗೀತಾ ಕೀನಾಲ್ | ವಾರ್ಡ್ ಸಮಿತಿ ಸದಸ್ಯರು. |
| 6. | ಶ್ರೀ. ಕೆ ಗಂಗಹನುಮಯ್ಯ | ವಾರ್ಡ್ ಸಮಿತಿ ಸದಸ್ಯರು. |
| 7. | ಶ್ರೀ. ಸತೀಶ್ ರಾಮದಾಸ್ | ವಾರ್ಡ್ ನಾಗರೀಕರು. |
| 8. | ಶ್ರೀ. ಗಂಗಯ್ಯ | ಹಿರಿಯ ಆರೋಗ್ಯ ಪರೀವಿಕ್ಷಕರು, ವಾರ್ಡ್-67. |
| 9. | ಶ್ರೀ. ಮಂಜುನಾಥ್ | ತೋಟಗಾರಿಕೆ ಇಲಾಖೆ ಮೇಸ್ತ್ರಿ, ಪಶ್ಚಿಮ ವಲಯ. |
| 10. | ಶ್ರೀ. ಗಿರೀಶ್. ಬಿ | ಬೆಂ.ಜ.ಮಂ ಜಲ ಪರೀವಿಕ್ಷಕರು ಎನ್ ಡಬ್ಲೂ-1. |
| 11. | ಕುಮಾರಿ. ಪುಷ್ಪ | ಸಹಾಯಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ. |
| 12. | ಕುಮಾರಿ. ಸುನೀತ | ಕಿರಿಯ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ. (ಬೋರ್ವೆಲ್ ನಿರ್ವಹಣೆ) |
| 13. | ಶ್ರೀ. ಮೋಹಮದ್ | ಸಬ್ ಇನ್ಸ್‌ಪೆಕ್ಟರ್, ಸುಬ್ರಮಣ್ಯನಗರ ಪೋಲೀಸ್ ಠಾಣೆ. |
| 14. | ಶ್ರೀ. ಪ್ರದೀಪ್ | ಸಬ್ ಇನ್ಸ್‌ಪೆಕ್ಟರ್, ಸುಬ್ರಮಣ್ಯನಗರ ಪೋಲೀಸ್ ಠಾಣೆ. |



ಪು.ತಿ.ನೋ.

Scanned by CamScanner

| | | |
|---|---|---|
| | | ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್, ಸುಬ್ರಮಣ್ಯನಗರ ಪೊಲೀಸ್ ಠಾಣೆ. |
| 15. | ಶ್ರೀ. ವೆಂಕಟೇಶ್ | ಸಬ್ ಇನ್ಸ್‌ಪೆಕ್ಟರ್, ರಾಜಾಜಿನಗರ ಸಂಚಾರಿ ಪೊಲೀಸ್ ಠಾಣೆ. |
| 16. | ಶ್ರೀ. ಅರಸಯ್ಯ | ಬೀದಿ ದೀಪ ನಿರ್ವಹಣೆ, ಗುತ್ತಿಗೆದಾರರು. |
| 17. | ಶ್ರೀ. ಮಂಜುನಾಥ್ | ವಾರ್ಡ್ ಮಾರ್ಷಲ್ ವಾರ್ಡ್–67. |
| 18. | ಶ್ರೀ. ರಂಜಿತ್ ಕುಮಾರ್ | ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್, ಮಲ್ಲೇಶ್ವರಂ ಸಂಚಾರಿ ಪೊಲೀಸ್ ಠಾಣೆ. |
| 19. | ಶ್ರೀ. ಮುನಿಸ್ವಾಮಿ | ಪಶು ಕೆಲಸ ವಿಭಾಗ. |
| 20. | ಶ್ರೀ. ಕೆ.ವಿ ಲೊಕೇಶ್ | ಕಂದಾಯ ಪರೀವಿಕ್ಷಕರು, ವಾರ್ಡ್–67 |
| 21. | ಶ್ರೀ. ಮಂಜುನಾಥ್ | ಗೈರು ಹಾಜರಿ. |
| 22. | ಮಹಾಲಕ್ಷ್ಮಿಲೇಔಟ್ ಪೊಲೀಸ್ ಠಾಣೆ. | ಗೈರು ಹಾಜರಿ. |
| 23. | ಸಹಾಯಕ ಅಭಿಯಂತರರು, ಬೆಂ.ಜ.ಮಂ ಎನ್.ಡಬ್ಲೂ–2 | ಗೈರು ಹಾಜರಿ. |
| 24. | ಸಹಾಯಕ ಅಭಿಯಂತರರು, ಬೆಸ್ಕಂ ಎನ್–7 ಉಪವಿಭಾಗ | ಗೈರು ಹಾಜರಿ. |
| 25. | ಸಹಾಯಕ ಅಭಿಯಂತರರು, ಬೆಸ್ಕಂ ಎನ್–1 ಉಪವಿಭಾಗ | ಗೈರು ಹಾಜರಿ. |
| 26. | ಅರಣ್ಯ ಇಲಾಖೆ, ಪಶ್ಚಿಮ ವಲಯ. | ಗೈರು ಹಾಜರಿ. |
| 27. | ಕಿರಿಯ ಆರೋಗ್ಯ ಪರೀವಿಕ್ಷಕರು. | |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಮೇ ಮಾಹೆಯ ದಿ: [illegible]/0[illegible]/2022 ರಂದು ಬೆಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

<u>ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:</u>

| | |
|---|---|
| ಶ್ರೀ.ಉದಯ ಶಂಕರ್ 1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. | ವಾರ್ಡ್‌ನ ರಾಜಾಜಿನಗರ 1ನೇ ಆರ್ ಬ್ಲಾಕ್‌ನಲ್ಲಿ 20ನೇ 'ಎ' ಮೈನ್ ಹಾಗು 20ನೇ 'ಬಿ' ಮೈನ್‌ನಲ್ಲಿ ಸಿಸಿ ಕ್ಯಾಮೇರ ಚಾಲ್ತಿಯಲ್ಲಿರುವುದಿಲ್ಲ ಇವುಗಳನ್ನು ಸರಿಪಡಿಸಲು ಹಾಗು ನಿರ್ವಹಣೆ ಮಾಡಲು ಸಭೆಯಲ್ಲಿ ಕೋರಿದರು. |
| ಶ್ರೀ. ಸತೀಶ್ ರಾಮದಾಸ್ ವಾರ್ಡ್‌ನ ನಾಗರೀಕರು. | ವಾರ್ಡ್‌ನ ಸ್ವಾತಿ ಹೋಟೆಲ್ ಅಂಡರ್ ಪಾಸ್‌ಗೆ ಹಾಗು ರಾಜಾಜಿನಗರ 1ನೇ ಬ್ಲಾಕ್ ಸಿಗ್ನಲ್‌ಗೆ ಹೊಸದಾಗಿ ಸಿಸಿ ಕ್ಯಾಮೇರಾ ಅಳವಡಿಸಬೇಕು ಇದರಿಂದ ವಾಹನ ಅಪಘಾತಗಳನ್ನು ಹಾಗು ವಿಲಿಂಗ್ ಮಾಡುವ ಪುಂಡರನ್ನು ಪೊಲೀಸ್ ಇಲಾಖೆಯವರಿಗೆ ನಿಯಂತ್ರಿಸಲು ಸುಲಭವಾಗುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |

ಪು.ತಿ.ನೋ.



Scanned by CamScanner

| | |
|---|---|
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು ವಾರ್ಡ್-67 | ವಾರ್ಡ್‌ನ ರಾಜಾಜಿನಗರ 1ನೇ ಆರ್ ಬ್ಲಾಕ್‌ನ ಸಂಘದ ಅಧ್ಯಕ್ಷರ ದೂರಿಗೆ ಸಂಭಂದಿಸಿದಂತೆ ವಾರ್ಡ್‌ನಲ್ಲಿ ಸಿಸಿ ಕ್ಯಾಮೇರಾ ದುರಸ್ತಿ ಹಾಗು ನಿರ್ವಹಣೆ ಮಾಡಲು ಅನುಮೋದನೆ ದೊರೆತಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು ಹಾಗು ವಾರ್ಡ್‌ನ ನಾಗರೀಕರಾದ ಶ್ರೀ ಸತ್ತೀಶ್ ರವರ ದೂರಿಗೆ ಸಂಭಂದಿಸಿದಂತೆ ವಾರ್ಡ್‌ನಲ್ಲಿ ಈಗಾಗಲೇ ಸಿ.ಸಿ.ಟಿ.ವಿ ಅಳವಡಿಸುವ ಕಾಮಗಾರಿಯು ಮುಕ್ತಯವಾಗಿರುತ್ತದೆ ಸದರಿ ಹೊಸ ಜಾಗಕ್ಕೆ ಸಿಸಿ ಕ್ಯಾಮೇರಾ ಅಳವಡಿಸಲು ಹೊಸ ಅನುದಾನ ಬಿಡುಗಡೆಯಾದಾಗ ಪಟ್ಟಿ ತಯಾರಿಸಿ ಅನುಮೋದನೆ ಪಡೆದು ಕಾಮಗಾರಿ ನಿರ್ವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು.<br>ಈಗಾಗಲೇ ಅಳವಡಿಸಿಕೊಳ್ಳಲಾಗಿರುವ ಸಿಸಿ ಕ್ಯಾಮೇರಾಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಕಸ / ತ್ಯಾಜ್ಯ ಸುರಿಯುವವರನ್ನು ಸೆರೆಯಿಡಿಯುವಂತೆ ಕೇಂದ್ರಕರಿಸಲು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು. |
| ಶ್ರೀ. ಪಿ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಮಾನ್ಯ ನೋಡಲ್ ಅಧಿಕಾರಿಯವರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ವಾರ್ಡ್-67 ನಾಗಪುರದಲ್ಲಿ ಕೋವಿಡ್-19ಗೆ ಸಂಭಂಧಿಸಿದಂತೆ ಮಾಹಿತಿಗಳ ವಿವರಣೆ ನೀಡುವಂತೆ ಶ್ರೀ, ಗಂಗಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಸಭೆಯಲ್ಲಿ ಸೂಚಿಸಿದರು. |
| ಶ್ರೀ. ಗಂಗಯ್ಯ<br>ಹಿರಿಯ ಆರೋಗ್ಯ ಪರೀವಿಕ್ಷಕರು,<br>ವಾರ್ಡ್-67 | ಶ್ರೀ, ಗಂಗಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡುತ್ತಾ, ಕಳೆದ ಒಂದು ವಾರದಿಂದ ಇತ್ತೀಚಿನ ದಿನಗಳಲ್ಲಿ ಯಾವುದೇ ಹೊಸ ಪ್ರಕರಣಗಳು ಕಂಡುಬಂದಿರುವುದಿಲ್ಲ ಮತ್ತು ಯಾವುದೇ ಡೆತ್ ಕೇಸ್‌ಗಳು ಕಂಡುಬಂದಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ. ಪಿ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಕಪ್ಪು ಚುಕ್ಕಿ ಪ್ರದೇಶಗಳನ್ನು ಕಣ್ಣಿಗಾವಲು ಮಾಡಿ ಕಸ ಹಾಕುವವರಿಗೆ ದಂಡ ವಿಧಿಸಲು ಹಾಗು ಸಾರ್ವಜನಿಕರಿಗೆ ಅರಿವು ಮೂಡಿಸಲು ನಿರ್ದೇಶಿಸಲಾಯಿತು ಮುಂದುವರಿಯುತ ಹಸಿ ಹಾಗು ಒಣ ತ್ಯಾಜ್ಯ ಸಂಗ್ರಹಕಾರರು ಮನೆ ಮನೆಯಿಂದ ಸಂಗ್ರಹಿಸುವ ಹಸಿ ತ್ಯಾಜ್ಯವನ್ನು ಅವರ ವತಿಯಿಂದಲೇ ಸಂಸ್ಕರಿಸಿ ನಿರ್ವಹಿಸಲು ಸೂಚಿಸುವುದು ಒಂದು ವೇಳೆ ಅನುಪಯುಕ್ತ ಒಣ ತ್ಯಾಜ್ಯವನ್ನು ರಸ್ತೆಗೆ ಬಿಸಾಡಿದಲ್ಲಿ ಅವರಿಗೆ ದಂಡ ವಿಧಿಸಲು ಸೂಚಿಸಲಾಯಿತು. ಮಾರ್ಷಲ್ ಇಬ್ಬರ ಸಮುಖದಲ್ಲಿ ಇನ್ನು ಹೆಚ್ಚು ನಿಷೇದಿತ ಏಕ ಬಳಕೆ ಪ್ಲಾಸ್ಟಿಕ್ ಬಳಕೆದಾರರ ಅಂಗಡಿಗಳನ್ನು ರೈಡ್ ಮಾಡಿ ದಂಡ ಹಾಕಲು ಸೂಚಿಸಿದರು. |
| ಶ್ರೀ. ಗಂಗಯ್ಯ<br>ಹಿರಿಯ ಆರೋಗ್ಯ ಪರೀವಿಕ್ಷಕರು,<br>ವಾರ್ಡ್-67 | ಮಾನ್ಯ ನೋಡಲ್ ಅಧಿಕಾರಿಯವರು ಸೂಚಿಸಿರುವಂತೆ ಏಕ ಬಳಕೆದಾರರ ಅಂಗಡಿಗಳ ಮೇಲೆ ರೈಡ್ ಮಾಡಿ ದಂಡ ಹಾಕಿ ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್‌ನ ನಾಗರೀಕರು. | ವಾರ್ಡ್‌ನಲ್ಲಿ ಹಲವು ರಸ್ತೆಗಳಲ್ಲಿ ರಸ್ತೆ ನಾಮ ಫಲಕಗಳು ಬಿದ್ದು ಹೋಗಿರುತ್ತವೆ, ಹಾಗು ಹಲವು ರಸ್ತೆಗಳಲ್ಲಿ ನಾಮ ಫಲಕಗಳು ಇರುವುದಿಲ್ಲ ಇದರಿಂದ ರಸ್ತೆಯ ಹೆಸರು ತಿಳಿಯುವುದು ತೊಂದರೆಯಾಗುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು ವಾರ್ಡ್-67 | ವಾರ್ಡ್‌ನ ರಸ್ತೆಗಳಲ್ಲಿ ರಸ್ತೆ ನಾಮ ಫಲಕಗಳು ಬಿದ್ದು ಹೋಗಿರುವುದು ಹಾಗು ನಾಮ ಫಲಕಗಳು ಇಲ್ಲದಿರುವುದನ್ನು ಗುರುತಿಸಿ ಅಂದಾಜು ಪಟ್ಟಿ ತಯಾರಿಸಿ ಹೊಸ ನಾಮ ಫಲಕಗಳನ್ನು ಅಳವಡಿಸಲು ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ತಿಮ್ಮರಸ್<br>ಕಾರ್ಯಪಾಲಕ ಅಭಿಯಂತರರು,<br>ಮಹಾಲಕ್ಷ್ಮೀಪುರಂ ವಿಭಾಗ. | ವಾರ್ಡ್‌ನಲ್ಲಿ 2022-2023 ನೇ ಸಾಲಿನ ಪಿ.ಒ.ಡ್ಬ್ಲೂ ಅನುದಾನದಡಿಯಲ್ಲಿ ಅನುದಾನ ಲಭ್ಯವಿದ್ದು ವಾರ್ಡ್‌ನಲ್ಲಿ ತುರ್ತು ಕೆಲಸ ನಿರ್ವಹಿಸಲು ಸ್ಥಳ ಪರೀಶಿಲಿಸಿ ಸಹಾಯಕ ಅಭಿಯಂತರರು ಪಟ್ಟಿ ಮಾಡಿರುತ್ತಾರೆ ಮಾಡಿರುವ ಪಟ್ಟಿಯನ್ನು ಸಭೆಯಲ್ಲಿ ಓದಿ ತಿಳಿಸಲಾಯಿತು ಹಾಗು ಸಭೆಯಲ್ಲಿ ಮಂಡಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್‌ನ ನಾಗರೀಕರು. | ವಾರ್ಡ್‌ನ 2ನೇ ಮೈನ್‌ನ ಅಂಬೇಡ್ಕರ್ ಕಾಲೇಜು ಮೈದಾನಕ್ಕೆ ಗೇಟ್ ಇರುವುದಿಲ್ಲ ಹೊಸದಾಗಿ ಗೇಟ್ ಅಳವಡಿಸಲು ಸಭೆಯಲ್ಲಿ ತಿಳಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್-67 | ವಾರ್ಡ್‌ನ 2ನೇ ಮೈನ್‌ನ ಅಂಬೇಡ್ಕರ್ ಕಾಲೇಜು ಮೈದಾನಕ್ಕೆ ಗೇಟ್ ಅಳವಡಿಸಲು ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು. |

ಮು.ತಿ.ನೋ.



Scanned by CamScanner

| | |
|---|---|
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್–67 | ವಾರ್ಡ್‌ನ ಉಪ್ಪೆ ಉದ್ಯಾನದ ಹತ್ತಿರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ಪೈಪ್ ಲೈನ್ ಅಳವಡಿಸಲು ರಸ್ತೆ ಅಗೆದಿರುತ್ತಾರೆ, ಸದರಿ ಗುಂಡಿಗೆ ನಮ್ಮ ಇಲಾಖೆ ವತಿಯಿಂದ ಪ್ಯಾಚ್ ವರ್ಕ್ ಮಾಡಿಸಲಾಗಿರುತ್ತದೆ, ಸದರಿ ಸ್ಥಳದಲ್ಲಿರುವ ಡೆಬ್ರೀಸ್ ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರಿಗೆ ತಿಳಿಸಿದರು. |
| ಕುಮಾರಿ. ಪುಷ್ಪ<br>ಸಹಾಯಕ ಅಭಿಯಂತರರು,<br>ಬೆಂಗಳೂರು ನೀರು ಸರಬರಾಜು<br>ಮತ್ತು ಒಳಚರಂಡಿ ಮಂಡಳಿ. | ವಾರ್ಡ್‌ನ ಸಹಾಯಕ ಅಭಿಯಂತರರು ಸೂಚಿಸಿರುವಂತೆ ಡೆಬ್ರೀಸ್ ತೆರವುಗೊಳಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಪಿ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಮಾನ್ಯ ಮುಖ್ಯ ಆಯುಕ್ತರು ಸೂಚಿಸಿರುವಂತೆ ತೆರಿಗೆ ವಸೂಲಾತಿಗಾಗಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಹೇಳುವಂತೆ ತಿಳಿಸಿದರು. |
| ಶ್ರೀ. ಮಂಜುನಾಥ್<br>ಕಂದಾಯ ಪರೀವಿಕ್ಷಕರು, ವಾರ್ಡ್<br>ಸಂಖ್ಯೆ–67 | ಮಾನ್ಯ ಮುಖ್ಯ ಆಯುಕ್ತರ ಸೂಚನೆಯಂತೆ ತೆರಿಗೆ ವಸೂಲಾತಿ ಮಾಡಲಾಗುತ್ತಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಸರಿಯಾದ ರೀತಿಯಲ್ಲಿ ತೆರಿಗೆ ಪಾವತಿಯಾಗುತ್ತಿದ್ದು, ತೆರಿಗೆ ಪಾವತಿಸದ ಕೆಲವು ಸಾರ್ವಜನಿಕರಿಗೆ ನೋಟೀಸ್‌ಗಳನ್ನು ಜಾರಿ ಮಾಡಲಾಗಿರುತ್ತದೆ |
| ಶ್ರೀ. ಪಿ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಮುಖ್ಯ ರಸ್ತೆಗಳಲ್ಲಿ ತುಂಡಾಗಿರುವ ಒ.ಎಫ್.ಸಿ ಕೇಬಲ್‌ಗಳನ್ನು ಕೂಡಲೇ ತೆರವುಗೊಳಿಸಲು ಸೂಚಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರರು<br>ವಾರ್ಡ್–67 ಹಾಗು ಸಮಿತಿ<br>ಕಾರ್ಯದರ್ಶಿಗಳು. | ವಾರ್ಡ್‌ನ ನೋಡೆಲ್ ಅಧಿಕಾರಿಗಳು ಸೂಚಿಸಿರುವಂತೆ ತುಂಡಾಗಿರುವ ಒ.ಎಫ್.ಸಿ ಕೇಬಲ್‌ಗಳನ್ನು ತೆರವುಗೊಳಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ.ಉದಯ ಶಂಕರ್<br>1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ<br>ಸಂಘದ ಅಧ್ಯಕ್ಷರು. | ವಾರ್ಡ್‌ನ ಮಹಾಲಕ್ಷ್ಮೀಲೇಔಟ್ ಸಿಗ್ನಲ್‌ನಿಂದ ಪಂಚಮುಖಿ ದೇವಸ್ಥಾನದ ಕಡಿಗೆ (ಬಲಕ್ಕೆ) ತಿರುಗುವ ಮಾರ್ಗವನ್ನು ಡಿವೈಡರ್‌ನಿಂದ ಮುಚಿದ್ದು ಅದನ್ನು ಎಂದಿನಂತೆ ಮಾರ್ಗವನ್ನು ತೆರೆಯುವುದರಿಂದ ಸಾರ್ವಜನಿಕರಿಗೆ ಅನುಕುಲವಾಗುವುದು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಪಿ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ 1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರ ದೂರಿಗೆ ಸಂಭಂದಿಸಿದಂತೆ ಕಾರ್ಯಪಾಲಕ ಅಭಿಯಂತರರು ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ರವರಿಗೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀಮತಿ. ಗೀತಾ ಕೀನಾಲ್<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ 1ನೇ ಬ್ಲಾಕ್ ರಾಜಾಜಿನಗರದಲ್ಲಿ ಜಿಯೋ ಕೇಬಲ್ ಅಳವಡಿಸಲು ರಸ್ತೆ ಅಗೆದು ಸರಿ ಪಡಿಸದೆ ರಸ್ತೆಯಲ್ಲಿ ಗುಂಡಿಗಳಾಗಿರುತ್ತದೆ, ಹಾಗು ಅವರು ಗುಂಡಿಗಳಿಗೆ ಹಾಕಿರುವ ಪ್ಯಾಚ್ ವರ್ಕ್ ಸಿಂಕ್ ಆಗಿರುತ್ತದೆ ಇದರಿಂದ ವಾಹನ ಸವಾರರಿಗೆ ಹಾಗು ಪಾದಚಾರಿಗಳಿಗೆ ರಸ್ತೆಯಲ್ಲಿ ಸಂಚರಿಸಲು ತೊಂದರೆ ಉಂಟಾಗುತ್ತಿರುತ್ತದೆ. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್–67 | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಜಿಯೋ ಕೇಬಲ್ ರವರ ವಿರುದ್ಧ ಈಗಾಗಲೇ ದೂರು ನೀಡಲಾಗಿದೆ ಹಾಗು ಜಿಯೋ ಕೇಬಲ್‌ರವರಿಗೆ ಕೂಡಲೇ ಗುಂಡಿಗಳಿಗೆ ಪ್ಯಾಚ್ ವರ್ಕ್ ಮಾಡುವುದಾಗಿ ದೂರವಾಣಿ ಮುಖೇನ ತಿಳಿಸಿದರು. |
| ಶ್ರೀಮತಿ. ಗೀತಾ ಕೀನಾಲ್<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ 1ನೇ ಬ್ಲಾಕ್ ರಾಜಾಜಿನಗರದ 'ಎನ್' ಬ್ಲಾಕ್‌ನಲ್ಲಿ ರಸ್ತೆಗುಂಡಿಗಳಿವೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಪಿ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ 3 ದಿನಗಳೊಳಗೆ ರಸ್ತೆಯನ್ನು ಸರಿಪಡಿಸಿ ಎಂದಿನಂತೆ ಮಾಡಬೇಕು ಹಾಗು ರಸ್ತೆ ಮೇಲೆ ಬಿಟ್ಟಿರುವ ಹೂಳನ್ನು ತೆರವುಗೊಳಿಸಲು ಸೂಚಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್‌ನ ನಾಗರೀಕರು. | ವಾರ್ಡ್‌ನ 11ನೇ ಮುಖ್ಯರಸ್ತೆಯಲ್ಲಿ ಒಣಗಿರುವ ಮರಗಳ ರೆಂಬೆಗಳನ್ನು ಟ್ರೀಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |

[signature] ಪು.ತಿ.ನೋ.



Scanned by CamScanner

| | |
|---|---|
| ಶ್ರೀ. ಗಂಗಹನುಮಯ್ಯ<br>ವಾರ್ಡ್ ಸಮಿತಿ ಸದಸ್ಯರು | ಮಳೆಗಾಲ ಪ್ರಾರಂಭವಾಗುತ್ತಿರುವುದರಿಂದ ವಾರ್ಡ್‌ನ ಮುಖ್ಯರಸ್ತೆಗಳಲ್ಲಿ ಒಣಗಿರುವ ಮರಗಳ ರೆಂಬೆಗಳನ್ನು ಟ್ರೀಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್–67 | ವಾರ್ಡ್‌ನ ಅರಣ್ಯ ಇಲಾಖೆಗೆ ಸಂಭಂದಿಸಿದವರು ಸಮಿತಿ ಸಭೆಗೆ ಗೈರು ಹಾಜರಾಗಿರುತ್ತಾರೆ. ಆದ್ದರಿಂದ ಸದರಿ ದೂರನ್ನು ದೂರವಾಣಿ ಮುಖೇನ ಮರಗಳ ಟ್ರೀಮಿಂಗ್ ಮಾಡಲು ತಿಳಿಸಿದರು. |
| ಶ್ರೀ. ಪಿ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ 1ನೇ ಆರ್ ಬ್ಲಾಕ್ ರಾಜಾಜಿನಗರದಲ್ಲಿ ಬೋರ್‌ವೆಲ್ ದುರಸ್ಥಿಯಾಗಿರುವ ದೂರು ಇದ್ದು ಸದರಿ ದೂರಿನ ಬಗ್ಗೆ ಸ್ಥಳ ಪರೀಶಿಲಿಸಿ ವರದಿ ನೀಡುವಂತೆ ಸಭೆಯಲ್ಲಿ ಹಾಜರಿದ್ದ ಕಿರಿಯ ಅಭಿಯಂತರರಿಗೆ (ಬೋರ್‌ವೆಲ್ ನಿರ್ವಹಣೆ) ತಿಳಿಸಿದರು. |
| ಕುಮಾರಿ. ಸುನೀತ<br>ಕಿರಿಯ ಅಭಿಯಂತರರು,<br>ಬೆಂಗಳೂರು ನೀರು ಸರಬರಾಜು<br>ಮತ್ತು ಒಳಚರಂಡಿ ಮಂಡಳಿ.<br>(ಬೋರ್‌ವೆಲ್ ನಿರ್ವಹಣೆ) | ವಾರ್ಡ್‌ನ ಮಾನ್ಯ ನೋಡೆಲ್ ಅಧಿಕಾರಿಗಳ ದೂರಿನಂತೆ ಈಗಾಗಲೇ ದೂರಿನ ಬಗ್ಗೆ ಸ್ಥಳ ಪರಿಶಿಲನೆ ಮಾಡಲಾಗಿರುತ್ತದೆ, ಸದರಿ ಸ್ಥಳದಲ್ಲಿ ಹಳೆಯ ಬೋರ್‌ವೆಲ್ ಇದ್ದು ಅದು ಚಾಲ್ತಿಯಲ್ಲಿರುವುದಿಲ್ಲ ಅದ್ದನ್ನು ಎಂಡ್ ಕ್ಯಾಪ್‌ನಿಂದ ಮುಚ್ಚಿ ಕ್ರಮವಹಿಸುವುದಾಗಿ ಸಭೆಯಲ್ಲಿ ಮಾಹಿತಿ ಒದಗಿಸಿದರು. |
| ಶ್ರೀ. ಪಿ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ 12ನೇ ಮುಖ್ಯರಸ್ತೆ ಎಸ್.ಬಿ.ಐ ಬ್ಯಾಂಕ್ ಹತ್ತಿರ ಸಾರ್ವಜನಿಕರು ಕಸ ತಂದು ಹಾಕುತ್ತಿರುತ್ತಾರೆ, ಮಾರ್ಷಲ್‌ರವರು ಗಸ್ತು ತಿರುಗಿ ಅವರಿಗೆ ದಂಡ ವಿಧಿಸಲು ಸೂಚಿಸಲಾಯಿತು. |
| ಶ್ರೀ. ರಂಜಿತ್ ಕುಮಾರ್<br>ವಾರ್ಡ್ ಮಾರ್ಷ್‌ಲ್<br>ವಾರ್ಡ್–67. | ವಾರ್ಡ್‌ನ ಮಾನ್ಯ ನೋಡೆಲ್ ಅಧಿಕಾರಿಗಳ ದೂರಿನಂತೆ ಕಪ್ಪುಚುಕ್ಕಿ ಪ್ರದೇಶಗಳಿಗೆ ಗಸ್ತು ತಿರುಗಿ ದಂಡ ಹಾಕಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಗಂಗಹನುಮಯ್ಯ<br>ವಾರ್ಡ್ ಸಮಿತಿ ಸದಸ್ಯರು | ಮಳೆಗಾಲ ಪ್ರಾರಂಭವಾಗುತ್ತಿರುವುದರಿಂದ ವಾರ್ಡ್‌ನ ಚರಂಡಿ ಹಾಗು ರಸ್ತೆ ನಿರ್ಮಾಣ ಕೆಲಸ ನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ವೇಗವಾಗಿ ಕೆಲಸ ನಿರ್ವಹಿಸಲು ತಿಳಿಸಲು ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರಿಗೆ ತಿಳಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್‌ನ ನಾಗರೀಕರು. | ವಾರ್ಡ್‌ನ 12ನೇ ಅಡ್ಡರಸ್ತೆಯಲ್ಲಿ ಚರಂಡಿ ನಿರ್ಮಾಣ ಕೆಲಸವನ್ನು ವೇಗವಾಗಿ ನಿರ್ವಹಿಸಲು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್–67 | ವಾರ್ಡ್‌ನ ಸಮಿತಿ ಸದಸ್ಯರು ಹಾಗು ನಾಗರೀಕರು ತಿಳಿಸಿರುವಂತೆ ಗುತ್ತಿಗೆದಾರರಿಗೆ ವೇಗವಾಗಿ ಕೆಲಸ ನಿರ್ವಹಿಸಲು ನಿರ್ದೇಶಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್‌ನ ನಾಗರೀಕರು. | ವಾರ್ಡ್‌ನ ಪ್ರಗತಿ ನರ್ಸಿಂಗ್ ಹೋಮ್ ಬಳಿ ಅಭಾಂಡೆಡ್ ವಾಹನಗಳು ನಿಂತಿರುತ್ತವೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್–67 | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ ಪ್ರಗತಿ ನರ್ಸಿಂಗ್ ಹೋಮ್ ಬಳಿ ನಿಂತಿರುವ ಅಭಾಂಡೆಡ್ ವಾಹನಗಳಿಗೆ ಈಗಾಗಲೇ ನೋಟಿಸ್ ನೀಡಲಾಗಿದೆ ಮತ್ತು ಮುಂದಿನ ಕ್ರಮವಹಿಸಲು ಆರ್.ಟಿ.ಒ ರವರಿಗೆ ಪತ್ರ ಬರೆಯಲಾಗಿದೆ ಎಂದು ಸಭೆಗೆ ಮಾಹಿತಿ ಒದಗಿಸಿದರು. |
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್‌ನ ನಾಗರೀಕರು. | ವಾರ್ಡ್‌ನ ಕದಂಬ ಹೋಟೆಲ್ ಹತ್ತಿರ ಪುಟ್‌ಪಾತ್ ಸಿಂಕ್ ಆಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್–67 | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ ಕದಂಬ ಹೋಟೆಲ್ ರಸ್ತೆಯು ಮೇಜರ್ ರಸ್ತೆಯಾಗಿದ್ದು ಪುಟ್‌ಪಾತ್ ಸಿಂಕ್ ಆಗಿರುವ ಬಗ್ಗೆ ರಸ್ತೆ ಮೂಲಭೂತ ಸೌಕರ್ಯ ರವರಿಗೆ ತಿಳಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |

ಪು.ತಿ.ನೋ.



Scanned by CamScanner

| | |
|---|---|
| ಶ್ರೀ. ಸತೀಶ್ ರಾಮದಾಸ್<br>ವಾರ್ಡ್‌ನ ನಾಗರೀಕರು. | ವಾರ್ಡ್‌ನ ಚಿಣ್ಣರ ಧಾಮ ಮಕ್ಕಳ ಆಟದ ಮೈದಾನ ಹಾಗು ಇತರೆ ಉದ್ಯಾನಗಳನ್ನು ಇನ್ನಷ್ಟು ಅಭಿವೃಧಿ ಪಡೆಸಬೇಕು ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್–67 | ವಾರ್ಡ್‌ನ ನಾಗರೀಕರು ತಿಳಿಸಿರುವಂತೆ ಅನುದಾನ ಲಭ್ಯವಿದ್ದಾಗಾ ಮಕ್ಕಳ ಆಟದ ಮೈದಾನ ಹಾಗು ಇತರೆ ಉದ್ಯಾನಗಳನ್ನು ಅಭಿವೃಧಿ ಪಡೆಸುವ ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಪಿ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಅನನ್ಯ ಆಸ್ಪತ್ರೆ ಹತ್ತಿರ ಹಾಗೂ ಎದುರು ರಸ್ತೆ ಕೊನೆಯಲ್ಲಿ ಸರ್ಕಾರಿ ಶಾಲೆಯ ಬಳಿ ಬೋರ್‌ವೆಲ್ ದುರಸ್ಥಿಯಾಗಿರುತ್ತದೆ, ಅದರ ಬಗ್ಗೆ ಕ್ರಮವಹಿಸಲು ಸಭೆಯಲ್ಲಿ ಹಾಜರಿದ್ದ ಕಿರಿಯ ಅಭಿಯಂತರರಿಗೆ ತಿಳಿಸಿದರು. |
| ಶ್ರೀಮತಿ. ಗೀತಾ ಕೀನಾಲ್<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ರಾಜಾಜಿನಗರದ ಉದಯಕುಮಾರ್ ಉದ್ಯಾನದ ಹತ್ತಿರ ಬೋರ್‌ವೆಲ್ ದುರಸ್ಥಿಯಾಗಿರುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಕುಮಾರಿ. ಸುನೀತ<br>ಕಿರಿಯ ಅಭಿಯಂತರರು,<br>ಬೆಂಗಳೂರು ನೀರು ಸರಬರಾಜು<br>ಮತ್ತು ಒಳಚರಂಡಿ ಮಂಡಳಿ.<br>(ಬೋರ್‌ವೆಲ್ ನಿರ್ವಹಣೆ) | ವಾರ್ಡ್‌ನ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗು ವಾರ್ಡ್ ಸಮಿತಿ ಸದಸ್ಯರ ದೂರಿನಂತೆ ಸ್ಥಳ ಪರೀಶಿಲಿಸಿ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ವೆಂಕಟೇಶ್<br>ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್,<br>ಸುಬ್ರಮಣ್ಯನಗರ ಪೊಲೀಸ್ ಠಾಣೆ. | ವಾರ್ಡ್‌ನಲ್ಲಿ ರಸ್ತೆ ಅಪಘಾತಗಳು ಸಂಭವಿಸಿದಾಗ 108ಗೆ ಕರೆ ಮಾಡಿದಾಗ ಆಂಬ್ಯುಲೆನ್ಸ್‌ಗಳು ಸಮಯಕ್ಕೆ ಸರಿಯಾಗಿ ಬರುವುದಿಲ್ಲ ಅಪಘಾತ ಸ್ಥಳಕ್ಕೆ ಬರಲು ತುಂಬ ವಿಳಂಭ ಮಾಡುತ್ತಾರೆ ಇದರಿಂದ ಅಪಘಾತಗಳು ಆದಾಗ ಬಹಳ ತೊಂದರೆ ಉಂಟಾಗುತ್ತಿರುತ್ತದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಪಿ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್, ಸುಬ್ರಮಣ್ಯನಗರ ಪೊಲೀಸ್ ಠಾಣೆ ರವರ ದೂರಿಗೆ ಸಂಭಂದಿಸಿದಂತೆ 108 ಆಂಬ್ಯುಲೆನ್ಸ್‌ಗಳ ಸಹಾಯವಾಣಿಗೆ ಕರೆ ಮಾಡಿ ದೂರನ್ನು ತಿಳಿಸಿದರು ಹಾಗು ಮುಂದಿನ ಬಾರಿ ಸಮಸ್ಯೆ ಮರುಕಳಿಸದಂತೆ ಕ್ರಮವಹಿಸಲು ಸೂಚಿಸಲಾಯಿತು. |
| ಶ್ರೀ.ಉದಯ ಶಂಕರ್<br>1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ<br>ಸಂಘದ ಅಧ್ಯಕ್ಷರು. | ವಾರ್ಡ್‌ನ 1ನೇ ಆರ್ ಬ್ಲಾಕ್ ರಾಜಾಜಿನಗರದಲ್ಲಿ ಬೀದಿ ದೀಪ ಉರಿಯುತ್ತಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಮಂಜುನಾಥ್<br>ಬೀದಿ ದೀಪ ನಿರ್ವಹಣೆ,<br>ಗುತ್ತಿಗೆದಾರರು. | ವಾರ್ಡ್‌ನ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂದೆ ಬೀದಿ ದೀಪ ಸರಿಪಡಿಸುವ ಕ್ರಮವಹಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಪಿ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಪಶ್ಚಿಮ ಕಾರ್ಡ್ ರಸ್ತೆಗೆ ಅಡ್ಡಲಾಗಿ ಶ್ರೀ.ಕೃಷ್ಣ ಉದ್ಯಾನವನದ ಬಳಿ ಎತ್ತರಿಸಿದ ಪಾದಚಾರಿ ಮಾರ್ಗದ ನಿರ್ಮಾಣವನ್ನು ಕೂಡಲೇ ಪೂರ್ಣಗೊಳಿಸಿ, ಸಾರ್ವಜನಿಕರ ಬಳಕೆಗೆ ಒದಗಿಸಲು ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಅಭಿಯಂತರರಿಗೆ ದೂರವಾಣಿ ಮುಖೇನಾ ತಿಳಿಸಿದರು. |
| ಶ್ರೀ.ಉದಯ ಶಂಕರ್<br>1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ<br>ಸಂಘದ ಅಧ್ಯಕ್ಷರು. | ಕೃಷ್ಣ ಉದ್ಯಾನದ ಹಿಂಭಾಗದಲ್ಲಿ ಪಾದಚಾರಿ ಮೆಟ್ಟಿಲುಗಳ ನಿರ್ಮಾಣ ಕಾಮಗಾರಿ ಪ್ರಾರಂಭಿಸಿದ್ದು, ತಾತ್ಕಲಿಕವಾಗಿ ನಿಲ್ಲಿಸಲಾಗಿರುತ್ತದೆ, ಕೂಡಲೇ ಪ್ರಾರಂಭಿಸಿ ಪೂರ್ಣಗೊಳಿಸಲು ಸಭೆಗೆ ತಿಳಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್–67 | ಸದರಿ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಂಡು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು. |

ಪು.ತಿ.ನೋ.



Scanned by CamScanner

| | |
|---|---|
| ಶ್ರೀ. ಪಿ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಕೈಗೊಳ್ಳುವ ಎಲ್ಲಾ ಚರಂಡಿ ಕಾರ್ಯಗಳಲ್ಲಿ ಸ್ಥಳ ಲಭ್ಯತೆಗೆ ಅನುಸಾರ ಸೂಕ್ತ ವ್ಯಾಸದ / ಅಳತೆಗಳ ಮಳೆ ನೀರು ಇಂಗು ಗುಂಡಿಗಳನ್ನು ನಿರ್ಮಿಸಲು ಸೂಚಿಸಿದರು. ಇದರಿಂದಾಗಿ ಇತ್ತೀಚಿಗೆ ಬಿದ್ದ ಮಳೆಯಿಂದಾಗಿ ಮನೆಗಳಿಗೆ ನೀರು ನುಗ್ಗುವುದನ್ನು ತಡೆಗಟ್ಟಬಹುದಾಗಿರುತ್ತದೆ, ಇದರಿಂದಾಗಿ ಅಂತರ್ಜಲ ಸಂಗ್ರಹ ಏರಿಕೆಯಾಗುವುದು ಮತ್ತು ಮಳೆ ನೀರುಗಾಲುವೆಗಳಲ್ಲಿ ಹರಿಯುವುದನ್ನು ಸ್ವಲ್ಪ ಮಟ್ಟಿಗೆ ತಡೆಗಟ್ಟಬಹುದಾಗಿರುತ್ತದೆ ಎಂದು ತಿಳಿಸುತ್ತಾ, ಸಹಾಯಕ ಅಭಿಯಂತರವರಿಗೆ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಲಾಯಿತು. |

ವಾರ್ಡ್ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದೃಢೀಕೃತ ಮಾಹಿತಿಗಳನ್ನು ತಪ್ಪದೇ ವಾರ್ಡ್ ಕಮಿಟಿ ವಾರ್ಡ್–67 ವಾಟ್ಸ್ ಆಪ್ ಗ್ರೂಪ್ ನಲ್ಲಿ ಮತ್ತು ಪ್ರತಿ ವಾರ್ಡ್ ಸಮಿತಿ ಸಭೆಯಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ಪ್ರತಿಯನ್ನು

1. ಮಾನ್ಯ ವಲಯ ಉಪಆಯುಕ್ತರು (ಆಡಳಿತ), ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಕೇಂದ್ರ ರವರ ಅವಗಾಹನ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

Ramy 14/06/22

ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner